# ಕರ್ನಾಟಕ ಲೋಕಾಯುಕ್ತ

1) ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\337\2015\ಸನಿಕಾಸ-1 ಬಹುಮಹಡಿಗಳ ಕಟ್ಟಡ,
& 2)ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\4574\2015\ಸನಿಕಾಸ-1 ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:27/09/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೂರುದಾರರಾದ 1) ಶ್ರೀ.ಅವಿನಾಶ್ ಕುಲಕರ್ಣಿ ಬಿನ್ ಎಸ್.ಟಿ.ಕುಲಕರ್ಣಿ, #1008, 14ನೇ ಬಿ ಕ್ರಾಸ್, ವಿನೋಭನಗರ ಮತ್ತು 2) ಶ್ರೀ.ಸಂದೀಪ್ ಬಿನ್ ಸತ್ಯನಾರಾಯಣ, ತಿಲಕನಗರ, 4ನೇ ಕ್ರಾಸ್ ರಸ್ತೆ, ಶಿವಮೂರ್ತಿ ವೃತ್ತದ ಹತ್ತಿರ, ಶಿವಮೊಗ್ಗ ರವರ ದೂರನ್ನು ಪರಿಹರಿಸುವ ಬಗ್ಗೆ.

*******

ಶಿವಮೊಗ್ಗದ 1) ವಿನೋಭನಗರ, 14ನೇ ಬಿ ಕ್ರಾಸ್ ನಂ.1008ರ ನಿವಾಸಿಯಾದ ಶ್ರೀ.ಅವಿನಾಶ್ ಕುಲಕರ್ಣಿ ಮತ್ತು 2) ತಿಲಕನಗರ 4ನೇ ಕ್ರಾಸ್ ರಸ್ತೆ, ಶಿವಮೂರ್ತಿ ವೃತ್ತ ಹತ್ತಿರದ ನಿವಾಸಿಯಾದ ಶ್ರೀ.ಸಂದೀಪ್ ಬಿನ್ ಸತ್ಯನಾರಾಯಣ (ಇನ್ನು ಮುಂದೆ "ದೂರುದಾರರು 1 ಮತ್ತು 2" ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ) ತಮ್ಮ ದೂರುಗಳಲ್ಲಿ ಕ್ರಮವಾಗಿ, 1) ಶಿವಮೊಗ್ಗ ತಹಶೀಲ್ದಾರ್ ಹಾಗೂ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ 2) ಹಿರಿಯ ಭೂ ವಿಜ್ಞಾನಿಯಾದ ಶ್ರೀ.ಎಸ್.ಮಲ್ಲಿಕಾರ್ಜುನ, 3) ಕಿರಿಯ ಭೂ ವಿಜ್ಞಾನಿಯಾದ ಶ್ರೀಮತಿ.ವಿದ್ಯಾ ಮತ್ತು 4) ಪರಿಸರ ಇಲಾಖೆಯ ಪ್ರಾದೇಶಿಕ ಅಧಿಕಾರಿಯಾದ ಶ್ರೀ.ಆರ್.ಗುರುಮೂರ್ತಿ (ಇನ್ನು ಮುಂದೆ "1 ರಿಂದ 4ನೇ ಎದುರುದಾರ" ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಶಿವಮೊಗ್ಗ ತಾಲ್ಲೂಕ್ ಕಲ್ಲುಗಂಗೂರು, ಬಸವ ಗಂಗೂರು, ಹುಣಸೂಡು ಗ್ರಾಮಗಳಲ್ಲಿ ಕೆಲವೊಂದು ಕ್ರಷರ್‌ಗಳು ಪರವಾನಗಿ ಪಡೆದು ಕಾರ್ಯನಿರ್ವಹಿಸುತ್ತಿದ್ದು, ಸದರಿ ಕ್ರಷರ್‌ಗಳು ಪರವಾನಗಿ ಪ್ರಾಧಿಕಾರ ನೀಡಿದ ಷರತ್ತುಗಳನ್ನು ಹಾಗೂ ಮಾನ್ಯ ಸರ್ವೋಚ್ಛ ನ್ಯಾಯಾಲಯ ವಿಧಿಸಿದ ಷರತ್ತುಗಳು ಹಾಗೂ ಪರಿಸರ ಸಂರಕ್ಷಣಾ ಇಲಾಖೆಯವರು ನೀಡಿದ ಷರತ್ತುಗಳನ್ನು ಉಲ್ಲಂಘಿಸಿ ಕಾರ್ಯಪ್ರವೃತ್ತರಾಗಿದ್ದು, ಈ ಬಗ್ಗೆ ಎದುರುದಾರರಿಗೆ ದೂರು ನೀಡಿದರೂ ಸಹ ಎದುರುದಾರರು ಯಾವುದೇ ಕ್ರಮ ಕೈಗೊಂಡಿಲ್ಲ. ಸರ್ವೆ ನಂ.146 ಮತ್ತು 147ರಲ್ಲಿ 3 ಎಕರೆ ಜಾಗದಲ್ಲಿ ಹಿಂದು ಜನಾಂಗದ ಸ್ಮಶಾಣವಿದ್ದು, ಬಸವನಗಂಗೂರು ಗ್ರಾಮ ಶಿವಮೊಗ್ಗ ನಗರ ಪಾಲಿಕೆ ವ್ಯಾಪ್ತಿಗೆ ಮತ್ತು ಸೂಡಾ ವ್ಯಾಪ್ತಿಗೆ ಬರುತ್ತಿದ್ದು, ಸದರಿ ಪ್ರದೇಶವು ಜಿಲ್ಲಾಧಿಕಾರಿಗಳ ಕಛೇರಿಯಿಂದ 6

ಕಿಲೋಮೀಟರ್ ದೂರದಲ್ಲಿದೆ. ಅಲ್ಲದೇ, 200 ವಾಸದ ಮನೆಗಳು, ದೇವಸ್ಥಾನಗಳು, ಮಸೀಧಿ, ಶಾಲಾ ಮತ್ತು ಕಾಲೇಜುಗಳು ಇವೆ. ಸದರಿ ಕ್ರಷರ್‌ಗಳಿಂದ ಮತ್ತು ಬ್ಲಾಸ್ಟಿಂಗ್ ಕಾರ್ಯದಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗಿರುತ್ತದೆಂದು ಹೇಳಿದ್ದಾರೆ.

3. ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1 ಮತ್ತು 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಶಿವಮೊಗ್ಗ ನಗರದ ಹೊರ ವಲಯಕ್ಕೆ ಹೊಂದಿಕೊಂಡಿರುವ ಬಸವ ಗಂಗೂರು ಮತ್ತು ಗೆಜ್ಜೇನಹಳ್ಳಿ ವ್ಯಾಪ್ತಿಗಳಲ್ಲಿ 4 ಕಲ್ಲು ಗಣಿ ಗುತ್ತಿಗೆಗಳು ಚಾಲ್ತಿಯಲ್ಲಿವೆ. ಸದರಿ ಪ್ರದೇಶಕ್ಕೆ ಈ ಹಿಂದೆ ಪರವಾನಗಿ ನೀಡಲಾಗಿದೆ. ಸದರಿ ಗ್ರಾಮಗಳ ಸರ್ಕಾರಿ ಹಾಗೂ ಪಟ್ಟಾ ಜಮೀನುಗಳಲ್ಲಿ ಹೊಸದಾಗಿ ಗಣಿಗಾರಿಕೆ ಪ್ರಾರಂಭಿಸಲು 53 ಅರ್ಜಿಗಳು ಸ್ವೀಕೃತಗೊಂಡಿದ್ದು, ಕಂದಾಯ ಮತ್ತು ಅರಣ್ಯ ಇಲಾಖೆಯಿಂದ ನಿರಾಪೇಕ್ಷಣ ಪತ್ರ ಕೋರಿದ್ದು, ಅರಣ್ಯಾಧಿಕಾರಿಗಳು ಅಭಯಾರಣ್ಯದ 10 ಕಿಲೋಮೀಟರ್ ವ್ಯಾಪ್ತಿಗೊಳಪಡುವ ಪ್ರದೇಶದಲ್ಲಿ ಸದರಿ ಗ್ರಾಮಗಳು ಬರುವುದರಿಂದ ಮಂಜೂರು ಮಾಡುವ ಪೂರ್ವದಲ್ಲಿ ರಾಷ್ಟ್ರೀಯ ವನ್ಯ ಜೀವಿ ಮಂಡಳಿಯಿಂದ ಅನುಮತಿ ಪಡೆದುಕೊಳ್ಳುವ ಷರತ್ತಿಗೊಳಪಟ್ಟು ನಿರಾಪೇಕ್ಷಣ ಪತ್ರ ನೀಡಿದ್ದಾರೆ. ಆದರೆ, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ರವರು ಸದರಿ ಪ್ರದೇಶಗಳಿಗೆ ಗಣಿಗಾರಿಕೆ ಅನುಮತಿ ನೀಡಲು ಅವಕಾಶ ಇರುವುದಿಲ್ಲವೆಂದು ಮನವಿ ಸಲ್ಲಿಸಿದ್ದಾರೆ. ಈ ಹಿನ್ನೆಲೆಯಲ್ಲಿ ನಿಷೇದಿತ ಪ್ರದೇಶಗಳಲ್ಲಿ ಅಕ್ರಮವಾಗಿ ಗಣಿಗಾರಿಕೆ ನಡೆಸುತ್ತಿರುವ ಬಗ್ಗೆ ಈಗಾಗಲೇ ಹಲವಾರು ಪ್ರಕರಣಗಳನ್ನು ದಾಖಲಿಸಿದೆ. ಅದರಂತೆ, ದಿ:01/01/15ರಂದು ಶಿವಮೊಗ್ಗ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ಸಂ:1/2015ರಂತೆ ಹಾಗೂ 2/2015, 194/15, 27/16, 10/2016 ಮತ್ತು ಪಿಸಿಆರ್ ನಂ.437/14, 618/2015, 619/2015ರಂತೆ ಪ್ರಕರಣ ದಾಖಲಿಸಿ, ಸದರಿ ಗಣಿಗಾರಿಕೆಗೆ ಸಂಬಂಧಪಟ್ಟಂತಹ ವಾಹನಗಳನ್ನು ತಡೆದು ಪೊಲೀಸರ ವಶಕ್ಕೆ ನೀಡಲಾಗಿದೆ. ಅಲ್ಲದೇ, ಅತೀ ಹೆಚ್ಚಿನ ದಂಡ ವಿದಿಸಿ ವಸೂಲಾತಿಗೆ ಕ್ರಮ ಕೈಗೊಳ್ಳಲಾಗಿದೆ. ಜಿಲ್ಲಾ ಕಲ್ಲು ಪುಡಿ ಮಾಡುವ ಘಟಕಗಳ ನಿಯಂತ್ರಣ ಸಮಿತಿಯ ಮೂಲಕ ಮತ್ತು ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿಯ ಮೂಲಕ ಅಕ್ರಮ ಗಣಿಗಾರಿಕೆಯನ್ನು ತಡೆಹಿಡಿಯಲಾಗಿದೆ. ಅದೇ ರೀತಿ, ಸ್ಫೋಟಕ ಬಳಸಿ ಗಣಿಗಾರಿಕೆ ನಡೆಸುತ್ತಿದ್ದವರ ವಿರುದ್ಧವೂ ಸಹ ಈಗಾಗಲೇ ಹಲವಾರು ಪ್ರಕರಣಗಳನ್ನು ದಾಖಲಿಸಿ, ಸದರಿ ಗಣಿಗಾರಿಕೆ ಕೇಂದ್ರಗಳನ್ನು ಮುಚ್ಚಲಾಗಿದೆಯೆಂದು ಹೇಳಿದ್ದಾರೆ.

4. ಮೂರನೇ (3ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಜಿಲ್ಲಾ ಕಲ್ಲು ಪುಡಿ ಘಟಕದ ಅಧ್ಯಕ್ಷರಾಗಿ ಶಿವಮೊಗ್ಗ ಜಿಲ್ಲಾಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿಯವರ ಅನುಮತಿಯ ಮೇರೆಗೆ ಕಳ್ಳಂಗೂರು ಗ್ರಾಮದಲ್ಲಿ ಒಟ್ಟು 5 ಗಣಿಗಾರಿಕೆಗಳು ನಡೆಯುತ್ತಿದ್ದು, ಅದೇ ರೀತಿ, ಶಿವಮೊಗ್ಗ ಜಿಲ್ಲೆಯಾದ್ಯಂತ 8 ಕ್ರಷರ್‌ಗಳು

ಜಿಲ್ಲಾಧಿಕಾರಿಗಳ ಅನುಮತಿಯ ಮೇರೆಗೆ ನಡೆಸಲಾಗಿದೆ. ಇವುಗಳ ಬಗ್ಗೆ ತಮ್ಮ ಇಲಾಖಾ ವತಿಯಿಂದ ಅನುಮತಿ ಪತ್ರವನ್ನು ಸಹ ನೀಡಲಾಗಿದೆ. ಆದರೆ, ಏನಾಯಿತು ಎಂಬ ಬಗ್ಗೆ ತಮಗೆ ತಿಳಿದಿಲ್ಲವೆಂದು ಹೇಳಿದ್ದಾರೆ.

5. ಆಕ್ಷೇಪಣೆಗಳಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಆಕ್ಷೇಪಣೆಯ ಅಂಶಗಳನ್ನು ಅಲ್ಲಗಳೆದಿರುತ್ತಾರೆ.

6. ದೂರಿನ ಬಗ್ಗೆ ತನಿಖೆ ಕೈಗೊಂಡು ವರದಿ ಸಲ್ಲಿಸುವಂತೆ ಆರಕ್ಷಕ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಶಿವಮೊಗ್ಗ (ಇನ್ನು ಮುಂದೆ, 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ರವರನ್ನು ಕೇಳಲಾಗಿ, ಸದರಿಯವರು ತಮ್ಮ ವರದಿಯಲ್ಲಿ –

> ದಿ:20/10/16ರಂದು ಕಲ್ಲಗಂಗೂರು, ಬಸವನಗಂಗೂರು ಹಾಗೂ ಹುಣಸೋಡು ಗ್ರಾಮಗಳಿಗೆ ಭೇಟಿ ನೀಡಿ ಬಿವಿಎಸ್ ಸ್ಟೋನ್ ಕ್ರಷರ್ ಮತ್ತು ರಾಘವೇಂದ್ರ ಸ್ಟೋನ್ ಕ್ರಷರ್‌ಗಳನ್ನು ಪರಿಶೀಲಿಸಲಾಗಿ, ಸದರಿ ಗಣಿಗಾರಿಕೆ ಸಂಸ್ಥೆಗಳು ಗ್ರಾಮಗಳಿಂದ ಸುಮಾರು ಒಂದು ಕಿಲೋಮೀಟರ್ ದೂರದಲ್ಲಿದ್ದು, ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದಿರುವುದು ಕಂಡು ಬಂದಿದೆ. ಅಲ್ಲದೇ, ಅಥಣಿ ಮೆಟಲ್ ಕ್ರಷರ್, ಪವನ್ ಸ್ಟೋರ್ ಕ್ರಷರ್, ವಿವೇಕ್ ಸ್ಟೋನ್ ಕ್ರಷರ್‌ಗಳು ಸಹ ಕಾನೂನು ರೀತಿ ಪರವಾನಗಿ ಪಡೆದು ನಿಯಮಾನುಸಾರ ನಡೆಸಲಾಗುತ್ತಿದೆ. ಕೆಲವು ಗಣಿಗಾರಿಕೆಗಳು ಅನಧಿಕೃತವಾಗಿ ನಡೆಸುತ್ತಿದ್ದು, ಈ ಬಗ್ಗೆ ಕ್ರಮ ಕೈಗೊಂಡು ವಾಹನಗಳನ್ನು ವಶಕ್ಕೆ ಪಡೆಯಲಾಗಿದೆ ಮತ್ತು ಸದರಿ ಗಣಿಗಾರಿಕೆಗಳ ವಿರುದ್ಧ ಪ್ರಕರಣ ದಾಖಲಿಸಿದೆ. ಕಲ್ಲು ಕ್ರಷರ್ ಮತ್ತು ಟಾರ್ ಪ್ಲಾಂಟ್‌ಗಳ ಸುತ್ತಲೂ ಜಿಂಕ್ ಶೀಟ್ ತೆಗೆದು ಅಳವಡಿಸಿ, ದೂಳು ಹೊರಚೆಲ್ಲದಂತೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಕೆಲವು ಗಣಿಗಾರಿಕೆಗಳಲ್ಲಿ ಅಕ್ರಮವಾಗಿ ಸ್ಫೋಟಕಗಳನ್ನು ಬಳಸಿ ಕಲ್ಲು ಪುಡಿ ಮಾಡುತ್ತಿದ್ದ ಸಂಸ್ಥೆಗಳ ವಿರುದ್ಧ ಈಗಾಗಲೇ ಹಲವಾರು ಪ್ರಕರಣಗಳನ್ನು ದಾಖಲಿಸಿದೆ. ಅಲ್ಲದೇ, 2014ರಲ್ಲಿ 11 ಪ್ರಕರಣಗಳು, 2015ರಲ್ಲಿ 13 ಪ್ರಕರಣಗಳು ಮತ್ತು 2016ರಲ್ಲಿ 9 ಪ್ರಕರಣಗಳನ್ನು ದಾಖಲಿಸಿದೆ. ಅಲ್ಲದೇ ಯಾವುದೇ ಅಕ್ರಮ ಕಲ್ಲು ಗಣಿಗಾರಿಕೆಯನ್ನು ನಡೆಯದಂತೆ ನೋಡಿಕೊಳ್ಳಲು ಅದೀನ ಅಧಿಕಾರಿಗಳಿಗೆ ಸೂಚನೆ ನೀಡಿದೆ. ಅಲ್ಲದೇ, ಸರ್ಕಾರದ ನಿಯಮಾವಳಿಗಳ ಪ್ರಕಾರ ಅಕ್ರಮವಾಗಿ ನಡೆಸುತ್ತಿದ್ದ ಗಣಿಗಾರಿಕೆಗಳ ವಿರುದ್ಧ ಪ್ರಕರಣ ದಾಖಲಿಸಿ, ಅವುಗಳನ್ನು ಸಂಪೂರ್ಣವಾಗಿ ಮುಚ್ಚಲಾಗಿದೆಯೆಂದು ಹೇಳಿದ್ದಾರೆ.

7. ವರದಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ಯಾವುದೇ ಪ್ರತ್ಯುತ್ತರವನ್ನು ಸಲ್ಲಿಸಿಲ್ಲ.

8. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಕಲ್ಲುಗಂಗೂರು, ಬಸವಗಂಗೂರು ಹಾಗೂ ಹುಣಸೂಡು ಗ್ರಾಮಗಳಲ್ಲಿ ಬಿವಿಎಸ್ ಸ್ಟೋನ್ ಕ್ರಷರ್, ರಾಘವೇಂದ್ರ ಸ್ಟೋನ್ ಕ್ರಷರ್, ಅಥಣಿ ಮೆಟಲ್ಸ್ ಕ್ರಷರ್, ಅರೇಕಲ್ಲಮ್ಮ ಸ್ಟೋನ್ ಕ್ರಷರ್, ಪವನ್ ಸ್ಟೋನ್ ಕ್ರಷರ್, ವಿವೇಕ್ ಸ್ಟೋನ್ ಕ್ರಷರ್ ಹಾಗೂ ಇತರೆ ಸ್ಟೋನ್ ಕ್ರಷರ್‌ಗಳು ಅಸ್ತಿತ್ವದಲ್ಲಿದ್ದು, ಸರ್ಕಾರಿ ಮತ್ತು ಪಟ್ಟಾ ಜಮೀನುಗಳಲ್ಲಿ ಹೊಸದಾಗಿ ಕಲ್ಲು ಗಣಿ ಗುತ್ತಿಗೆ ಮಂಜೂರಾತಿ ಮತ್ತು ನವೀಕರಣಕ್ಕಾಗಿ ಒಟ್ಟು 53 ಅರ್ಜಿಗಳು ಅನುಮತಿಗೆ ಬಾಕಿಯಿದ್ದು, ಅವುಗಳ ಪೈಕಿ ಅನಧಿಕೃತವಾಗಿ ಕೆಲವು ಗಣಿಗಾರಿಕೆಗಳು ನಡೆಸುತ್ತಿರುವುದು ಕಂಡು ಬಂದಿದೆ. ಕೆಲವು ಗಣಿಗಾರಿಕೆಗಳು ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಅರಣ್ಯ ಇಲಾಖೆ ಹಾಗೂ ಕಂದಾಯ ಇಲಾಖೆಗಳಿಂದ ನಿರಾಪೇಕ್ಷಣಾ ಮತ್ತು ಪರವಾನಗಿ ಪಡೆದು ನಡೆಸುತ್ತಿದ್ದು, ಕೆಲವು ಗಣಿಗಾರಿಕೆಗಳು ಅನಧಿಕೃತವಾಗಿ ನಡೆಸುತ್ತಿರುವುದು ಕಂಡು ಬಂದಿದೆ. ಅಲ್ಲದೇ, ಕಲ್ಲುಗಂಗೂರು ಗ್ರಾಮದಲ್ಲಿ 15, ಬಸವಗಂಗೂರು ಗ್ರಾಮದಲ್ಲಿ 2 ಹಾಗೂ ಹುಣಸೂಡು ಗ್ರಾಮದಲ್ಲಿ 4 ಘಟಕಗಳಿಗೆ ಪೂರ್ವಾನುಮತಿ ಪ್ರಮಾಣ ಪತ್ರವನ್ನು ಹಾಗೂ ಕಲ್ಲುಗಂಗೂರು ಗ್ರಾಮದಲ್ಲಿ 6, ಬಸವನಗಂಗೂರು ಗ್ರಾಮದಲ್ಲಿ 3 ಮತ್ತು ಹುಣಸೂಡು ಗ್ರಾಮದಲ್ಲಿ 2 ಕಲ್ಲುಮಡಿ ಮಾಡುವ ಘಟಕಗಳಿಗೆ ಪರವಾನಗಿ ಪ್ರಮಾಣ ಪತ್ರವನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ರವರು ಸಮಿತಿಯ ತೀರ್ಮಾನದಂತೆ ನೀಡಿರುವುದು ಕಂಡು ಬಂದಿದೆ. ಕಲ್ಲು ಕ್ರಷರ್ ಮತ್ತು ಟಾರ್ ಪ್ಲಾಂಟ್‌ಗೆ ಸಂಬಂಧಿಸಿದಂತೆ, ಪರಿಸರ ಮತ್ತು ವಾಯು ಮಾಲಿನ್ಯ ಅಧಿಕಾರಿಗಳು ನಿಯಮ ಮತ್ತು ನಿಬಂಧನೆಗೊಳಪಟ್ಟು ಕಲ್ಲು ಕ್ರಷರ್ ಮತ್ತು ಟಾರ್ ಪ್ಲಾಂಟ್ ನಡೆಸುವಂತೆ ನೋಟೀಸ್ ನೀಡಿರುವುದು ಕಂಡು ಬಂದಿದೆ. ಅಲ್ಲದೇ, ಅವುಗಳಿಂದ ದೂಳು ಹೊರಚೆಲ್ಲದಂತೆ ಸುತ್ತಲೂ ಜಿಂಕ್ ಶೀಟ್ ತಗಡು ಅಳವಡಿಸಿ, ಸುರಕ್ಷಾ ಕ್ರಮ ಕೈಗೊಂಡಿರುವುದು ಕಂಡು ಬಂದಿದೆ. ಕೆಲವು ಕ್ರಷರ್‌ಗಳಲ್ಲಿ ಸ್ಫೋಟಕ ವಸ್ತುಗಳನ್ನು ಬಳಸಿ, ಅಕ್ರಮ ಗಣಿಗಾರಿಕೆ ನಡೆಸುತ್ತಿದ್ದು, ಈ ಬಗ್ಗೆ ಸೂಕ್ತ ನಿರ್ದೇಶನ ನೀಡಿರುವುದು ಕಂಡು ಬಂದಿದೆ. ಸದರಿ ಗ್ರಾಮಗಳಲ್ಲಿ ನಡೆಸುತ್ತಿರುವ ಎಲ್ಲಾ ಗಣಿಗಾರಿಕೆಗಳು ಗಣಿ ನಿಯಂತ್ರಣ ಅಧಿನಿಯಮ, 2011 ನಿಯಮ 3(1) ಮತ್ತು 4(1)ರನ್ವಯ ಅನುಮತಿ ಪಡೆದು ಷರತ್ತುಗಳನ್ವಯ ಕ್ರಷರ್ ನಡೆಸುತ್ತಿರುವುದು ಮತ್ತು ಶಾಲಾ ಮತ್ತು ಗ್ರಾಮಗಳಿಂದ ಸುಮಾರು 1 ಕಿಲೋಮೀಟರ್ ದೂರದಲ್ಲಿರುವುದು ಕಂಡು ಬಂದಿದೆ. ಸರ್ಕಾರಿ ಮತ್ತು ಪಟ್ಟಾ ಜಮೀನುಗಳಲ್ಲಿ ನಡೆಸುತ್ತಿರುವ ಅನಧಿಕೃತ ಕಲ್ಲು ಗಣಿಗಾರಿಕೆ ಮತ್ತು ಸ್ಫೋಟಕಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಶಿವಮೊಗ್ಗ ಗ್ರಾಮಾಂತರ ಠಾಣೆಗಳಲ್ಲಿ 2014ರಲ್ಲಿ 11 ಪ್ರಕರಣಗಳು, 2015ರಲ್ಲಿ 13 ಪ್ರಕರಣಗಳು ಮತ್ತು 2016ರಲ್ಲಿ 9 ಪ್ರಕರಣಗಳನ್ನು ದಾಖಲಿಸಿ, ಸದರಿ ಗಣಿಗಾರಿಕೆಯಲ್ಲಿ ಭಾಗಿಯಾದ ಮಾಲೀಕರು ಮತ್ತು ವಾಹನಗಳನ್ನು ವಶಕ್ಕೆ ಪಡೆದು ದಂಡ ವಿಧಿಸಿ ವಸೂಲಿ ಮಾಡಿರುವುದು ದಾಖಲೆಗಳಿಂದ ಕಂಡು ಬಂದಿದೆ.

9. ಆದ್ದರಿಂದ, ಸದರಿ ಗ್ರಾಮಗಳ ವ್ಯಾಪ್ತಿಯಲ್ಲಿ ಯಾವುದಾದರೂ ಅಕ್ರಮ ಗಣಿಗಾರಿಕೆ ನಡೆಯುತ್ತಿದ್ದಲ್ಲಿ, ಅವುಗಳನ್ನು ಕಾನೂನು ರೀತಿ ಕ್ರಮ ಕೈಗೊಂಡು ಮುಚ್ಚುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ

Sd/-

ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

10. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 27/9/17

(ನ್ಯಾಯಮೂರ್ತಿ ಸುಬಾಷ್ ಬಿ ಅಡಿ)
ಉಪಲೋಕಾಯುಕ್ತ-2,
ಕರ್ನಾಟಕ ರಾಜ್ಯ.